**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ ಕೊಪ್ಪಳ**

ಸಿ.ಸಿ.ನಂಃ 2946/2022

CW ( 01 ) PW ( 01 )

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 10-09-2025

| | |
|---|---|
| ಸಾಕ್ಷಿದಾರರ ಹೆಸರು | ಲಕ್ಕಪ್ಪ |
| ತಂದೆ ಹೆಸರು | ಭೀಮಪ್ಪ ಅಗ್ನಿ |
| ವಯಸ್ಸು | 44 ವರ್ಷ |
| ಉದ್ಯೋಗ | ಪಿ ಐ., ಸಿಐಡಿ ಧಾರವಾಡ |
| ವಾಸಸ್ಥಳ | ಧಾರವಾಡ |

ಪಿಸಿ ನಂ. 554 ಕೊಪ್ಪಳ ಗ್ರಾಮೀಣ ಠಾಣೆ ಇವರ ವಾಟ್ಸ್ ಅಫ್ ನ ವಿಡಿಯೋ ಕಾಲ್ ನ ಮುಖಾಂತರ ವಿಚಾರಣೆಯನ್ನು ಬೆರಳಚ್ಚು ಮಾಡಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ನಾನು 2021 ರಿಂದ ಜೂನ್ 2022 ರವರೆಗೆ ಪಿ ಎಸ್ ಐ ಯಾಗಿ ಫಿರ್ಯಾದಿ ಠಾಣೆಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 19-07-2022 ರಂದು ಬೆ. 10.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ನನಗೆ ದೂರವಾಣಿ ಮೂಖಾಂತರ ಹಲವರ್ತಿ ಗ್ರಾಮದ ಕುಣಿಕೇರಿ ಬಸ್ ನಿಲ್ದಾಣದ ಹತ್ತಿರ ಒಬ್ಬ ಹೆಣ್ಣುಮಗಳು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಬಾತ್ಮಿ ಬಂದಿದ್ದು, ಅಕಾರಣ ನಾನು ಚಾಸಾ -4 ರವರೆಗೆ ದಾಳಿಗೆ ನನ್ನೊಂದಿಗೆ ಬರಲು ಸೂಚಿಸಿದ್ದು, ಚಾಸಾ 4 ರವರಿಗೆ ಪಂಚರನ್ನು ಬರಮಾಡಿಕೊಂಡು ಬರುವಂತೆ ಹೇಳಿದ್ದು, ಅದರಂತೆ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಬಂದು ನನಗೆ ಪರಿಚಯಿಸಿದ್ದು, ಅವರಿಗೆ ದಾಳಿಗೆ ಹೋಗುವ ವಿಷಯವನ್ನು ತಿಳಿಸಿದ್ದು ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ.

ನಂತರ ಮುಂಜಾನೆ 08.30 ಗಂಟೆಗೆ ನಾನು ಮತ್ತು ಚಾಸಾ 4 ರವರ ಜೊತೆ ಇಲಾಖೆ ಜೀಪುನಲ್ಲಿ ಠಾಣೆಯಿಂದ ಹೊರಟು ಮುಂಜಾನೆ 09.10 ರ ಸುಮಾರಿಗೆ ಗುನ್ನಸ್ಥಳದ ಸಮೀಪ ಸುಮಾರು 100 ಅಡಿ ದೂರದಲ್ಲಿ ಜೀಪನ್ನು ನಿಲ್ಲಿಸಿ ನಾವೆಲ್ಲರೂ ಕಾಲುನಡಿಗೆಯಲ್ಲಿ ಹೋಗಿ ನಿಂತು ನೋಡಲಾಗಿ ಆರೋಪಿಯು ಮದ್ಯ ಮಾರಾಟ ಮಾಡುತ್ತಿದ್ದು ಹಾಗೂ ಖರೀದಿಸಲು ಜನರು ಸೇರಿದ್ದರು. ನಂತರ ನಾನು ಮತ್ತು ಸಿಬ್ಬಂದಿಗಳು ದಾಳಿ ಮಾಡಿದ್ದು, ನಮ್ಮನ್ನು ನೋಡಿ ಖರೀದಿಸಲು ಬಂದ ಜನರು ಓಡಿ ಹೋಗಿದ್ದು, ಆರೋಪಿಯು ಸಿಕ್ಕಿ ಬಿದಿರುತ್ತಾಳೆ.

ಆರೋಪಿಯನ್ನು ವಿಚಾರಿಸಿದಾಗ ಆಕೆಯ ಹೆಸರು ಸುದಾ ಉರಗಡ್ಡಿ ಎಂದು ತಿಳಿಸಿದ್ದು, ಮದ್ಯ ಮಾರಾಟ ಮಾರಾಟ ಮಾಡಲು ಯಾವುದೇ ಪರವಾನಿಗೆಯನ್ನು ಹೊಂದಿರುವುದಿಲ್ಲ. ನಂತರ ಅವರನ್ನು ಪರಿಶೀಲನೆ ಮಾಡಿದಾಗ ಒಂದು ರಟ್ಟಿನ ಬಾಕ್ಸನಲ್ಲಿದ್ದ ಈ ಕೆಳಕಂಡ ಟೆಟ್ರಾ ಪ್ಯಾಕೇಟ್ ಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ವಶಪಡಿಸಿಕೊಂಡಿರುತ್ತೇನೆ.

| | |
|---|---|
| 1. | 90 ಎಂ ಎಲ್ ನ ಹೆಚ್ ಸಿ ವಿಸ್ಕಿ 94 ಟೆಟ್ರಾ ಪ್ಯಾಕೇಟ್ ಗಳು. |
| 2. | 180 ಎಂ ಎಲ್ ನ ಓಟಿ ವಿಸ್ಕಿ 05 ಟೆಟ್ರಾ ಪ್ಯಾಕೇಟ್ ಗಳು. |

ಈ ಮೇಲಿನ ಮದ್ಯದ ಪ್ಯಾಕೇಟ್ ಗಳನ್ನು ಆರೋಪಿಯ ಬಳಿಯಿಂದ ಪಂಚರ ಸಮಕ್ಷಮ ಜಪ್ತಿಮಾಡಿಕೊಂಡು ಮುಂಜಾನೆ 09.20 ರಿಂದ 10.20 ರವರೆಗೆ ಪಂಚನಾಮೆಯನ್ನು ಜರುಗಿಸಿ ಗಣಕೀಕೃತಗೊಳಿಸಿ ನಂತರ ಠಾಣೆಗೆ ಬಂದು ಪ್ರಿಂಟ್ ನ್ನು ತೆಗೆದು ಪಂಚರ ಸಹಿ ಪಡೆದಿರುತ್ತೇನೆ. ಪಂಚನಾಮೆಯನ್ನು ಮುಗಿಸಿ ಮುಂಜಾನೆ 11.00 ಗಂಟೆಗೆ ಠಾಣೆಗೆ ಹಾಜರಾಗಿ ಚಾಸಾ 8 ರವರಿಗೆ ನನ್ನ ಗಣಕೀಕೃತ ಫಿರ್ಯಾದಿಯನ್ನು ನೀಡಿ, ಪಂಚನಾಮೆ ಮತ್ತು ಮುದ್ದೆಮಾಲುಗಳು ಹಾಗೂ ಆರೋಪಿಯ ಸಮೇತ ಅವರ ವಶಕ್ಕೆ ನೀಡಿರುತ್ತೇನೆ.

ಸಾಕ್ಷಿಯು ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು ಸದರಿ ಫಿರ್ಯಾದಿಯನ್ನು ನಿಪಿ 1 ಎಂದು ಮತ್ತು ಅತನ ಸಹಿಯನ್ನು ನೀಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ 2 ಮತ್ತು ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಈ ಪ್ರಕರಣದ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ. 1 ರಿಂದ 99 ಎಂದು ಗುರುತಿಸಲಾಯಿತು.

ಆರೋಪಿಯು ಗೈರು ಹಾಜರಿದ್ದು ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ, ಆರೋಪಿಯನ್ನು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಹೇಳಿದ್ದು, ಅಕಾರಣ ಅರ್ಜಿಯನ್ನು ಪುರಸ್ಕರಿಸಲಾಗಿರುತ್ತದೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಭಾವಿಸಲಾಯಿತು .

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಬಾತ್ಮಿ ಬಂದ ತಕ್ಷಣ ನಾನು ಪ್ರ.ವ.ವರದಿಯನ್ನು ತಯಾರಿಸಿರುವುದಿಲ್ಲ. ಠಾಣಾ ಎಸ್ ಹೆಚ್ ಓ ರವರಿಗೆ ತಿಳಿಸಿರುತ್ತೇನೆ. ದಾಳಿಗೆ ಹೋಗುವ ಮುಂಚೆ ಯಾವುದೇ ಅನುಮತಿಯನ್ನು ಪಡೆದಿರುವುದಿಲ್ಲ ಕಾರಣ ಸಮಯದ ಅಭಾವ ಇರುವುದರಿಂದ. ಹಣದ ಮುಖಬೆಲೆ ಹೇಳಲು ಅಗುವುದಿಲ್ಲ ಪಂಚರಿಗೆ ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ ಅದರೇ ಮೌಖಿಕವಾಗಿ ತಿಳಿಸಿರುತ್ತೇವೆ. ಪಂಚನಾಮೆಗೆ ಬರೆದರುವ ಸಹಿಯನ್ನು ದಸ್ತೂರ ಎಂದು

ಬರೆದಿರುವುದಿಲ್ಲ. ದಾಳಿ ಮಾಡಲು ನಾನು, ಚಸಾ 2 ರಿಂದ 4 ಮತ್ತು ಚಾಲಕ ಹೋಗಿದ್ದೇವು. ಗುನ್ನೆಜಾಗಕ್ಕೆ ಹೋಗುವ ಮುಂಚೆ ನಾನು ಠಾಣಾ ಡೈರಿಯಲ್ಲಿ ನಮೂದಿಸಿ ದಾಳಿಗೆ ಹೋಗಿರುತ್ತೇನೆ. ನಾವು ದಾಳಿ ಮಾಡಿದಾಗ ಅರೋಪಿತರು ಇರಲಿಲ್ಲ. ನಾವು ಯಾವುದೇ ದಾಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿದ್ದೇವೆ ಎಂದರೆ ಸರಿಯಲ್ಲ. ಇಲಾಖೆ ಅಂಕಿ ಅಂಶಗೋಸ್ಕರ ಸುಳ್ಳು ಕೇಸು ದಾಖಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ರಾಸಾಯನಿಕ ಪರೀಕ್ಷೆಗೋಸ್ಕರ ಸ್ಥಳದಲ್ಲಿ ಯಾವುದೇ ಬಾಟಲಿಗಳನ್ನು ಸೀಲ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮುಮಾಗಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**